ಮದ್ದಗಿರಿ ಸಬ್ ಡಿವಿಜ್ ಮುನಸಿಫ್ ಕೋರ್ಟಿನಿಂದ.

ಸ್ ೧೮೯೪—೯೫ನೇ ಇಸವಿ ಸಿವಿಲ್ ಒರಿಜನಲ್ ನಂಬರ್ 418.

ಮನಸೀಫ್ ಡಿ. ಯಂ. ನರಸಿಂಗರಾವ್ ಯಸ್ಕ್ವೈರ್, ಬಿ. ಎ. ಬಿ. ಎಲ್. ಯವರ ರೂಬರೂಬ್.

ವಾದಿಗಳು.	ಪ್ರತಿವಾದಿ.
೧ರಾ ಕಸಬಾದಲ್ಲಿರುವರು 1ನೇ ಅಕ್ಕ ಬರ್‌ಸಾಬಿ. 2ನೇ ಇಮಾಮು ಮೊಹದ್ದಿಸಾಬಿ. 3ನೇ ಉಸುಮ್ಮಾನ್‌ಸಾಬಿ. 4ನೇ ಅಕ್ಕ ಬರ್‌ಖಾ. 5ನೇ ಹೈದರ್‌ಸಾಬಿ.	೧ರಾದಲ್ಲಿರುವ ರಾಜಾಅಹಮದ್ ಸಾಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ತುಮಕೂರು ಡಿಸ್ಟ್ರಿಕ್ಟು ೧ರಾ ತಾಲ್ಲೂಕು ೧ರಾ ಕಸಬಾದಲ್ಲಿರುವ ಮಂಗಳವಾರಪೇಟೆಯಲ್ಲಿ ಪೂರ್ವಕ್ಕೆ ಆದ್ಯಪ್ಪನ ಮನೆ, ಪಶ್ಚಿಮಕ್ಕೆ ಶೇತುವೆನೀರು ಹೋಗುವನಾಲ್ಕು, ಉತ್ತರಕ್ಕೆ ತಿರಗಾಡುವ ದಾರಿ, ದಕ್ಷಿಣಕ್ಕೆ ಪೈರೋಡ್ ಈ ಮಧ್ಯೆ ಇರುವ ನಿವೇಶನವಲ್ಲಿ ಮಹಂಮದಿ ಜಾತಿಜನಗಳು ಬಾರಾಯಿಮಾಮು ಪಂಜಾ ಕೂಡಿಸುವ ಆಷರ್‌ಖಾನ ಜಾಗಕ್ಕೆ ಸಂಬಂಧಪಟ್ಟದ್ದೆಂತಲೂ (b) ಇತರರು 1ನೇ ಪ್ರತಿವಾದಿಗೆ ಕ್ರಯ ಮಾಡಲು ಯಾವ ವಿಧವಾದ ಹಕ್ಕೂ ಇಲ್ಲವೆಂತಲೂ (c) ಪ್ರತಿವಾದಿಯು ಇತರ ಜನಗಳಿಂದ ಪಡದು ಇರುವ ಕ್ರಯಸಾಧನದಂತೆ ಹೊಂದಿರುವ ಡಿಕ್ರಿಯು ಮತ್ತು ಕ್ರಯಪತ್ರವು ಅಸಿದ್ಧವಾಗಿರತಕ್ಕದ್ದೆಂತಲೂ (d) ಈ ಪ್ರತಿವಾದಿ ಯಿಂದ ವಾದಿಗಳು ಪೂರ್ವದಂತೆ ದಾವಾ ನಿವೇಶನವನ್ನ ತಮ್ಮ ಹಕ್ಕು ಸ್ಥಾಪನೆಯಿಂದ ಸ್ವಾಧೀನ ಮಾಡಿಕೊಂಡು ಅವಿಚ್ಛಿನ್ನವಾಗಿ ಸದರೀ ಪಂಜಾ ಕೂಡಿಸಲು ವಾದಿಗಳು ಅರುಹರೆಂತಲೂ ಮೇಲ್ಕಂಡ ವಾದಿಗಳು ಈ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ.

ಈ ದಾವಾಕ್ಕೆ ಕಕ್ಷಿಗಾರರಾಗಿ ಕೇರಲಪೇಕ್ಷೆ ಇರುವ ದರೋಬಸ್ತು ಜನಗಳು ಈ ಮೊಕದ್ದಮೆ ಹಿಯರಿಂಗ್ ಯಿಟ್ಟು ಇರುವ 1896ನೇ ಇಸವಿ ಡಿಸೆಂಬರ್ 10ನೇ ತಾರೀಖು ದಿವಿ 11 ಘಂಟೆಗೆ ಮದ್ದಗಿರಿ ಮೊಕ್ಕಾಂ ನಮ್ಮ ಕೋರ್ಟು ರೂಬರೂಬ್ ಹಾಜರಾಗ ತಕ್ಕದ್ದಿದೆ.

ತಾರೀಖು 13ನೇ ನವಂಬರ್ 1896ನೇ ಇಸವಿ.

ಡಿ. ಯಂ. ನರಸಿಂಗರಾವ್,
ಮುನಸಿಫ್.

ಮೈಸೂರ್ ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ಸ್ ೧೮೯೬ನೇ ಇಸವಿ ಅಕ್ಟೋಬರ್ ತಾರೀಖು 24ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಗುಂಡ್ಲು ತಾಲ್ಲೂಕು ಬೆರಂಬಾಡಿ ಮತ್ತು ಖಂಡಿಪುರದ ಜಂಗಲ್‌ಗಳಲ್ಲಿ ವಣ ಚೌಬೀನೆಯನ್ನು ಖರೀದಿಗೆ ಪಡಿಯಲು ಯಿಷ್ಟವುಳ್ಳವರು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಗೆ ಆಗಲಿ ಅಥವಾ ಗುಂಡ್ಲು ರೇಂಜಾಫಿಸರಿಗಾಗಲಿ ದರಖಾಸ್ತುಗಳನ್ನು ಕೊಡಬಹುದು.

2. ದರಖಾಸ್ತುದಾರ ಸದರೀ ಚೌಬೀನೆಯನ್ನು ಜಂಗಲ್‌ಗಳಲ್ಲಿ ತಯಾರು ಮಾಡಿಸಿ ಸಾಗಿಸಿಕೊಳ್ಳಬೇಕು. ಮತ್ತು ಈ ಭಾಗದಲ್ಲಿ ಜಾರಿಯಲ್ಲಿರುವ ರೂಲ್ಸ್‌ಗಳಿಗೆ ಬದ್ಧನಾಗಿರತಕ್ಕದ್ದು.

3. ಈ ಚೌಬೀನೆಗಳು ಮೈಸೂರು ಉಡ್ಡಿಯಾರ್ಡ್ ಮತ್ತು ಗುಂಡ್ಲು ಡಿಪೋ ದರಗಳಂತೆ ಆಯಾಯ ಜಂಗಲ್ ತಯಾರಿ ಮತ್ತು ಲೈ ಛಾರ್ಜ್ ಜಾತಾ ಬಿಕರಿ ಮಾಡಲ್ಪಡುತ್ತವೆ.

4. ಖರೀದಿಗೆ ಪಡಿಯಲೂ ಇಷ್ಟವುಳ್ಳವರು ಈ ವಿಷಯವಾಗಿ ಜಾಸ್ತೀ ತಪ್ಶೀಲ್ ತಿಳಿಯಬೇಕೆಂದು ಕುತೂಹಲ ವಿದ್ದಲ್ಲಿ ಗುಂಡ್ಲು ರೇಂಜಾಫಿಸರಿಗೆ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಅರ್ಜಿ ಗುಜರಾಯಿಸಿ ಕೊಳ್ಳಬಹುದಾಗಿರುತ್ತೆ.

ಎಂ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಕಡೂರು ಡಿಸ್ಟ್ರಿಕ್ಟು.
ಕೊಪ್ಪ ತಾಲ್ಲೂಕು.
ಇಸ್ತಿಹಾರ್‌ನಾಮೆ.

ತಾರೀಖು 6ನೇ ಅಕ್ಟೋಬರ್ ಸ್ ೧೮೯೬ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕೊಪ್ಪ ತಾಲ್ಲೂಕು ಬೈರೇದೇವರು ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ ೧೮೯೬ನೇ ಇಸವಿ ಡಿಸೆಂಬರ್